

ಕ್ಷಮಾ ರಾವ್ ಅವರ ಗುರು ಕೇಳುಚರಣ್ ಮೊಹಪಾತ್ರ ಅವರ ನೃತ್ಯ ಭಂಗಿಗಳ ಚಿತ್ರ

ನಾನು 'ಅಪೂರ್ವ ಪಶ್ಚಿಮ' ಕೃತಿ ಓದಿದ ಬಳಿಕ ಬಹಳ ತಡವಾಗಿ ಆ ದೇಶಗಳಿಗೆ ಹೋಗಿ ಅಲ್ಲಿನ ಕಲಾವಿನ್ಯಾಸವನ್ನು ನೋಡಿ ತಿಳಿದುಕೊಂಡೆ. ಮೂರು ನಾಲ್ಕು ಬಾರಿ ಪ್ಯಾರಿಸ್ ಮತ್ತು ಇಟಲಿಗೆ ಪ್ರವಾಸ ಮಾಡಿ ಅಪ್ಪನ ಅಧ್ಯಯನವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ. ಹಾಗೆಂದು ನನಗೆ ಬರೆಯುವ ಉದ್ದೇಶವೇನೂ ಇರಲಿಲ್ಲ. ಜರ್ಮನಿಯ ಲುಡ್ವಿಕ್ ಫೆಶ್ ಎಂಬ ವಿದ್ಯಾರ್ಥಿ ಮತ್ತು ಫ್ರೆಡ್ರಿಕ್ ಎಂಬ ಸಂಗೀತ ಗುರುಗಳು ಕಲಾಕ್ಷೇತ್ರದಲ್ಲಿದ್ದಾಗ ನನಗೆ ಪರಿಚಯವಾಗಿದ್ದರು. ಅವರು ನಮ್ಮ ಸಾಲಿಗ್ರಾಮ–ಉಡುಪಿಗೆ ಬಂದು ಊರಿನ ಸ್ಥಳೀಯ ವಿಷಯಗಳನ್ನು ತಿಳಿದುಕೊಂಡು ಹೋಗಿದ್ದರು. ನಾನು ಅವರ ಸಹಾಯದಿಂದ ಯುರೋಪ್‌ನ ಮ್ಯೂಸಿಯಂ, ಕಲಾಶಾಲೆಗಳನ್ನು, ಕಲಾಕೇಂದ್ರಗಳನ್ನು ನೋಡಿ ಬರುವುದು ಸಾಧ್ಯವಾಯಿತು.

ಅಪ್ಪನ ವ್ಯಕ್ತಿತ್ವ ಎಷ್ಟು ವಿಶಾಲವಾದುದೆಂದರೆ ಅವರು ಕಾಲಿಡದ ಜಾಗವಿಲ್ಲ. ಅವರು ನಡೆದ ಹಾದಿಯಲ್ಲಿ ಕೊಂಚವಾದರೂ ನಡೆದು ಈ ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳುವ ಪ್ರಯತ್ನ ಮಾಡುತ್ತಿರುವೆ. ನನಗೆ ಅವಕಾಶವಾದಾಗಲೆಲ್ಲ ಹೊಸದನ್ನು ಕಲಿಯುವ ಪ್ರಯತ್ನ ಮಾಡುತ್ತಲೇ ಇದ್ದೇನೆ. ಉದಾಹರಣೆಗೆ, ಕಲೆಯ ಇತಿಹಾಸವನ್ನು ಕಲಿಯುವ ಅವಕಾಶ ಕಲಾಕ್ಷೇತ್ರದಲ್ಲಿ ದೊರೆಯಿತು ಎಂದೆನಲ್ಲ. ಜಗತ್ತಿನ ಕಲಾಪ್ರಕಾರಗಳನ್ನು ಅರ್ಥಮಾಡಿಕೊಳ್ಳಲು ಅದು ನನಗೆ ಇನ್ನಷ್ಟು ಬಲವಾದ ಆಧಾರವಾಯಿತು. ಉದಾಹರಣೆಗೆ, ಯುರೋಪ್‌ನಲ್ಲಿ ಧಾರ್ಮಿಕ ವಿಚಾರ ಆಧರಿಸಿದ ರಿಯಲಿಸ್ಟಿಕ್ ಕಲೆಗಳು ಇದ್ದವು. ನಂತರ ಬಂದ ಪ್ರಸಿದ್ಧ ಕಲಾವಿದರಾದ ಮೈಖೆಲ್ ಆಂಜೆಲೋ ಪೇಂಟಿಂಗ್‌ಗಾಗಿ ಜೀವನವನ್ನೇ ತೇಯ್ದಿದ್ದಾನೆ. ಅವನೂ ತನ್ನದೇ ಆದ ಶೈಲಿಯನ್ನು ರೂಪಿಸಿಕೊಂಡ ಮಹಾನ್ ವ್ಯಕ್ತಿ. ದೃಷ್ಟಿ ಬಿದ್ದುಹೋಗುವವರೆಗೂ ಪೇಂಟಿಂಗ್ ಮಾಡಿದ್ದನಲ್ಲ. ವಿನ್ಸೆಂಟ್ ವ್ಯಾನ್‌ಗೋ ಅವರಂತಹ ಕಲಾವಿದರು ಪ್ರತಿಪಾದಿಸಿದ ಇಂಪ್ರೆಷನಿಸ್ಟ್ ಮೂವ್‌ಮೆಂಟ್ ಅಥವಾ 'ಕ್ಷಣಬಿಂಬವಾದ'ದ ಚಿತ್ರಗಳು ನನ್ನನ್ನು ಆಕರ್ಷಿಸಿದವು. ಅಲ್ಲಿ ಪೇಂಟಿಂಗ್‌ಗೆ ಸಂಬಂಧಿಸಿ ಚಂದ್ರ ಕಫೇರೋ ಅವರ ಪಾಠಗಳು